ದಿನಾಂಕಃ 18-10-2022 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಬಿ ಎಂ ಎಲ್ ಜಿ ವಕೀಲರಿಂದಃ ಆರೋಪಿತರ ಪರವಾಗಿಃ</u>

23. ಮೃತೆ ಲತಾ ಬುಕ್ಕಾಂಬೂದಿಯ ಕಲ್ಲೇಶ್ವರ ಕಾಲೇಜಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ವ್ಯಾಸಂಗ ಮಾಡಿದ್ದಳು ಎಂದರೆ ಸರಿ. ಸದರಿ ಕಾಲೇಜಿಗೆ ನಿಮ್ಮ ಮಗಳು ದಂದೂರಿನಿಂದ ಹೋಗಿ ಬರುತ್ತಿದ್ದಳು ಎಂದರೆ ಸರಿ. 1 ನೇ ಆರೋಪಿಯು ಸಹ ಸದರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ 1 ನೇ ಆರೋಪಿ ಮತ್ತು ನಿಮ್ಮ ಮಗಳು ಲತಾಳಿಗೆ ಪರಿಚಯವಾಗಿ ಪ್ರೀತಿ ಬೆಳೆದಿತ್ತು ಎಂದರೆ ನನಗೆ ಗೊತ್ತಿಲ್ಲ. ದ್ವಿತೀಯ ಪಿಯುಸಿ ವಿದ್ಯಾಭ್ಯಾಸ ಮುಗಿದ ನಂತರ ನಿಮ್ಮ ಮಗಳು ಲತಾಳನ್ನು ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿಗೆ ಸೇರಿಸಲಾಗಿತ್ತು ಎಂದರೆ ಸರಿ. ನಾನು ಎಸ್ ಎಸ್ ಎಲ್ ಸಿಯವರೆಗೆ ಓದಿದ್ದೇನೆ. ನನ್ನ ಮಗಳ ಬರವಣಿಗೆಯನ್ನು ನೋಡಿದರೆ ಗುರುತಿಸುತ್ತೇನೆ.

24. ನಿಡಿ.1 ರಲ್ಲಿರುವ ಸಹಿ ನನ್ನ ಮಗಳು ಲತಾಳದ್ದು. ಆದರೆ ಅದರಲ್ಲಿರುವ ಬರವಣಿಗೆ ಆಕೆಯದ್ದಲ್ಲ. ನಿಮ್ಮ ಮಗಳು

ದ್ವಿತೀಯ ಬಿ ಕಾಂ ಓದುತ್ತಿರುವಾಗ ಆಕೆ ಮತ್ತು 1 ನೇ ಆರೋಪಿ ಇಬ್ಬರು ಪರಸ್ಪರ ಪ್ರೀತಿ ಮಾಡುತ್ತಿದ್ದು ಆದರೆ 2 ವರ್ಷಗಳಿಂದ ಆತ ಮದುವೆಯಾಗದೇ ಇರುವುದರಿಂದ ಆತನೊಂದಿಗೆ ಮದುವೆ ಮಾಡಿಸಿಕೊಡಿ ಎಂದು ಅಜ್ಜಂಪುರ ಪೊಲೀಸ್ ಠಾಣೆಯ ಠಾಣಾಧಿಕಾರಿಗಳಿಗೆ ದಿನಾಂಕ 19.09.2018 ರಂದು ನಿಡಿ.1 ರಂತೆ ದೂರನ್ನು ಕೊಟ್ಟಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದೂರನ್ನು ಪೊಲೀಸರು ಸ್ವೀಕರಿಸಿ ನಿಡಿ.2 ರಂತೆ ಹಿಂಬರಹವನ್ನು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ದ್ವಿತೀಯ ಪಿಯುಸಿಯನ್ನು ಮುಗಿಸಿದ ಬಳಿಕ ಹಾಲಿನ ಡೈರಿಯ ವಾಹನದಲ್ಲಿ ಕೆಲಸ ಮಾಡಿಕೊಂಡಿದ್ದನು ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಊರಾದ ದಂದೂರಿನಲ್ಲಿ ಹಾಲಿನ ಡೈರಿ ಇದೆ ಎಂದರೆ ಸರಿ. 1 ನೇ ಆರೋಪಿ ಅಲ್ಲಿಗೆ ಹಾಲನ್ನು ತುಂಬಿಸಿಕೊಂಡು ಬರಲು ಬರುತ್ತಿದ್ದರಿಂದ ಆತ ವಾಹನವನ್ನು ಅಲ್ಲಿಯೇ ನಿಲ್ಲಿಸಿ ನಿಮ್ಮ ಮನೆಯಲ್ಲಿಯೇ ಮಲಗಿಕೊಳ್ಳುತ್ತಿದ್ದನು ಎಂದರೆ ಸರಿಯಲ್ಲ.

25. 2 ನೇ ಆರೋಪಿಗೆ ಗಂಗಾಧರಪ್ಪ ಎನ್ನುವ ಸಹೋದರನಿದ್ದಾನೆ ಎಂದರೆ ಸರಿ. 1 ನೇ ಆರೋಪಿ ಮತ್ತು ಲತಾ ಪ್ರೀತಿ ಮಾಡುತ್ತಿದ್ದ ವಿಚಾರ ನಿಮಗೆ ಗೊತ್ತಾದ ಬಳಿಕ ನೀವು ಸದರಿ ಗಂಗಾಧರಪ್ಪನವರ ಮನೆಗೆ ಹೋಗಿ ಬಂದು ಮಾಡುತ್ತಿದ್ದಿರಿ ಎಂದರೆ ಸರಿಯಲ್ಲ. ಸದರಿ ಗಂಗಾಧರಪ್ಪನ ಹೆಂಡತಿ ಭಾರತಿ ಎಂದರೆ ಸರಿ. 1 ನೇ ಆರೋಪಿ ಮತ್ತು ಲತಾ

ಪ್ರೀತಿ ಮಾಡುತ್ತಿದ್ದರಿಂದ ನೀವು ಸದರಿ ಭಾರತಿಯ ಬಳಿ ಅವರ ಮದುವೆಯ ಬಗ್ಗೆ ಪ್ರಸ್ತಾಪ ಮಾಡಿದ್ದಿರಿ ಎಂದರೆ ಸರಿಯಲ್ಲ. ದಂಡೂರಿನ ಪಕ್ಕ ಬೇಲೇನಹಳ್ಳಿ ಇದೆ ಎಂದರೆ ಸಾಕ್ಷಿ ದಂಡೂರಿನಿಂದ ಬೇಲೇನಹಳ್ಳಿಗೆ ಸುಮಾರು 50 ರಿಂದ 60 ಕಿಲೋ ಮೀಟರ್ ದೂರವಾಗುತ್ತದೆ ಎನ್ನುತ್ತಾರೆ. ನೀವು ಸದರಿ ಬೇಲೇನಹಳ್ಳಿಗೆ ಹೋಗಿ ಅಲ್ಲಿನ ಶಾಸ್ತ್ರಿಯೊಬ್ಬರ ಬಳಿ ನಿಮ್ಮ ಮಗಳು ಲತಾ ಮತ್ತು 1 ನೇ ಆರೋಪಿಯ ಮದುವೆಯ ಬಗ್ಗೆ ವಿಚಾರಿಸಿಕೊಂಡು ಬಂದಿದ್ದಿರಿ ಎಂದರೆ ಸರಿಯಲ್ಲ.

26. 2 ನೇ ಆರೋಪಿಯ ತಾಯಿ ಸುಶೀಲಮ್ಮ ದಂಡೂರಿನಿಂದ 10 ಕಿಲೋ ಮೀಟರ್ ದೂರದಲ್ಲಿರುವ ಜಲ್ದಿ ಹಳ್ಳಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಕೆ ದಂಡೂರಿನಲ್ಲಿಯೇ ಇದ್ದಾರೆ ಎನ್ನುತ್ತಾರೆ. ಸದರಿ ಸುಶೀಲಮ್ಮ ದಂಡೂರಿನಲ್ಲಿಯೇ ಇದ್ದ ಬಗ್ಗೆ ಪೊಲೀಸರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಪೊಲೀಸರು ಆ ಬಗ್ಗೆ ವಿಚಾರಿಸಿಲ್ಲ ಹಾಗಾಗಿ ನಾನು ಹೇಳಿಲ್ಲ ಎನ್ನುತ್ತಾರೆ. ಆರೋಪಿತರು ಮತ್ತು ಅವರ ಸಂಬಂಧಿಕರು ನಿಮ್ಮ ಮಗಳನ್ನು ಕೊಲೆ ಮಾಡಿದ್ದಾಗಿ ಹೇಳಿದ್ದೀರಿ ಆ ಬಗ್ಗೆ ನಿಮಗೆ ವೈಯಕ್ತಿಕ ಮಾಹಿತಿ ಇಲ್ಲ, ಬೇರೆಯವರಿಂದ ತಿಳಿದಿದ್ದಾಗಿ ಹೇಳಿದ್ದೀರಿ ಎಂದರೆ ಸಾಕ್ಷಿ ನಾನು ಅದನ್ನು ನೋಡಿದ್ದರೆ ಆಕೆಯನ್ನು ಸಾಯಿಸಲು ಬಿಡುತ್ತಿದ್ದೆನೆ ಎನ್ನುತ್ತಾರೆ.

27. ನಿಮ್ಮ ಮಗಳ ಕೊಲೆಯಾಗಿದೆ ಎಂದು ಹೇಳಲಾದ

ವಿಚಾರದಲ್ಲಿ ಆರೋಪಿತರನ್ನು ಹೊರತುಪಡಿಸಿ ಅವರ ಸಂಬಂಧಿಕರ ವಿರುದ್ಧ ಯಾವುದೇ ದೂರು ದಾಖಲಾಗಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯ ಮೈದುನ ಆರಕ್ಷಕ ಉಪ ನಿರೀಕ್ಷಕನಾಗಿ ಕೆಲಸ ಮಾಡುತ್ತಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ಮಗಳು ಯಾವ ದಿನಾಂಕದಂದು ಮದುವೆಯಾಗಿದ್ದಾಳೆ ಎಂದು ನಿಮಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ.

28. ಸಹ್ಯಾದ್ರಿ ಕಾಲೇಜಿನ ಹಾಸ್ಟೆಲ್ ನಿಂದ ಯಾರು, ಯಾವಾಗ ನಿಮ್ಮ ಮಗಳನ್ನು ಕರೆದುಕೊಂಡು ಹೋಗಿ ಮದುವೆ ಮಾಡಿಸಿದರು ಎನ್ನುವ ಬಗ್ಗೆ ನಿಮಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ಮದುವೆಗೆ ಯಾರು ಯಾರು ಸೇರಿದ್ದರು ಎನ್ನುವ ಬಗ್ಗೆ ನಿಮಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಮಗಳ ಮೊಬೈಲ್ ನಲ್ಲಿ ಆ ಬಗ್ಗೆ ಫೋಟೋಗಳು ಮತ್ತು ವೀಡಿಯೋಗಳು ಇದ್ದವು ಎನ್ನುತ್ತಾರೆ. ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಮನೆಯಲ್ಲಿ ನಿಮ್ಮ ಮಗಳು ಇರುವುದಾಗಿ ಯಾರಿಂದ ತಿಳಿಯಿತು ಎಂದರೆ ಸಾಕ್ಷಿ ನನಗೆ ಅವರ ಹೆಸರು ಗೊತ್ತಿಲ್ಲ ಆದರೆ ನಮ್ಮ ಊರಿನವರಿಂದ ತಿಳಿಯಿತು ಎನ್ನುತ್ತಾರೆ. ನಿಮ್ಮ ಮಗಳು ಬಳಸುತ್ತಿದ್ದ ಮೊಬೈಲ್ ಯಾವ ಕಂಪೆನಿಗೆ ಸೇರಿದ್ದು ಮತ್ತು ಅದರ ಸಂಖ್ಯೆ ಏನು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಮೊಬೈಲನ್ನು ನಿಮ್ಮ ಮಗಳು

ನಿಮಗೆ ಕೊಟ್ಟಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

29. ಒಂದು ತಿಂಗಳ ಕಾಲ ನಿಮ್ಮ ಮಗಳು ಮತ್ತು 1 ನೇ ಆರೋಪಿ ಚೆನ್ನಾಗಿ ಇದ್ದುದ್ದಾಗಿ ಊರಿನವರಿಂದ ತಿಳಿಯಿತು ಎಂದು ನೀವು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಲತಾ ವಿಷ ಕುಡಿದ ದಿನ, ದಿನಾಂಕ, ತಿಂಗಳು ನನಗೆ ಹೇಳಲಾಗುವುದಿಲ್ಲ. ಲತಾ ಕೆಲಸಕ್ಕೆ ಹೋಗುತ್ತಿದ್ದ ಬಗ್ಗೆ ಬುಕ್ಕಾಂಬೂದಿಗೆ ಕೆಲಸಕ್ಕೆ ಹೋಗುತ್ತಿದ್ದವರಿಂದ ತಿಳಿಯಿತು ಎಂದು ಹೇಳಿದ್ದೀರಿ ಅವರ ಹೆಸರು ಏನು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೀವು ಅವರ ಹೆಸರನ್ನು ಪೊಲೀಸರಿಗೆ ತಿಳಿಸಿಲ್ಲ ಎಂದರೆ ಸರಿ. ಆರೋಪಿತರು ಮತ್ತು ಲತಾಳಿಗೆ ಸರಿ ಬರದ ಕಾರಣ 2 ರಿಂದ 4 ನೇ ಆರೋಪಿತರು ಶಿವನಿಯಲ್ಲಿ ಬೇರೆ ಮನೆ ಮಾಡಿಕೊಂಡು ಇದ್ದರು ಮತ್ತು 1 ನೇ ಆರೋಪಿ ಮತ್ತು ಲತಾ ಬುಕ್ಕಾಂಬೂದಿಯಲ್ಲಿ ಇದ್ದರು ಎಂದರೆ ಸರಿ.

30. ಬುಕ್ಕಾಂಬೂದಿಯಲ್ಲಿ ಲತಾಳಿಗೆ ಸರಿಯಾಗಿ ಊಟ ಕೊಡದೇ ನೀರಿನ ನಲ್ಲಿಯನ್ನು ಮತ್ತು ಕರೆಂಟನ್ನು ಕಿತ್ತು ಹಾಕಿದ್ದಾಗಿ ಹೇಳಿದ್ದೀರಿ ಆ ಬಗ್ಗೆ ಯಾರಿಗಾದರೂ ದೂರನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಆ ಬಗ್ಗೆ ಅಜ್ಜಂಪುರ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದೇನೆ ಎನ್ನುತ್ತಾರೆ. ಆ ಬಗ್ಗೆ ಪೊಲೀಸರು ಯಾವುದಾದರೂ ಕ್ರಮ ಜರುಗಿಸಿದ್ದಾರೆಯೇ ಎಂದರೆ ಸಾಕ್ಷಿ ಆರೋಪಿತರನ್ನು ಕರೆಯಿಸಿದ್ದರು ಮತ್ತು ಅವರು

ಇನ್ನು ಮುಂದೆ ಆ ರೀತಿ ಮಾಡುವುದಿಲ್ಲವೆಂದು ಹೇಳಿದ್ದರಿಂದ ಬುದ್ಧಿ ಹೇಳಿ ಕಳುಹಿಸಿದ್ದರು ಎನ್ನುತ್ತಾರೆ. ಆ ಸಮಯದಲ್ಲಿ ನೀವು ಹೋಗಿರಲಿಲ್ಲ ಎಂದರೆ ಸರಿ.

31. ಲತಾ ಬುಕ್ಕಾಂಬೂದಿಯಲ್ಲಿ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ಆಕೆಗೆ ಸಂಬಳ ಬರುತ್ತಿತ್ತು ಎಂದರೆ ಸರಿ. ಅದೇ ರೀತಿ ಆರೋಪಿಯು ಸಹ ಹಾಲಿನ ಡೈರಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ಆತನಿಗೂ ಸಂಬಳ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಮಗಳು ಲತಾ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ನೀವು ಆಕೆಯ ಕ್ಷೇಮ ಸಮಾಚಾರವನ್ನು ವಿಚಾರಿಸಿಲ್ಲ ಎಂದರೆ ಸಾಕ್ಷಿ ವಿಚಾರಿಸಿದ್ದೆವು ಆದರೆ ಆಕೆ ಬರುವುದಿಲ್ಲವೆಂದು ಹೇಳಿದ್ದಳು ಎನ್ನುತ್ತಾರೆ. ಆ ರೀತಿ ನಾವು ಆಕೆಯ ಕ್ಷೇಮ ಸಮಾಚಾರವನ್ನು ವಿಚಾರಿಸಿದ ದಿನ, ವಾರ ಮತ್ತು ತಿಂಗಳನ್ನು ನನಗೆ ಹೇಳಲು ಬರುವುದಿಲ್ಲ.

32. ಮೂರ್ತಪ್ಪ ಸುವರ್ಣಮ್ಮನ ಮುಖಾಂತರ ಸುಳ್ಳು ದೂರು ಕೊಡಿಸಿದ್ದಾಗಿ ಹೇಳಿದ್ದೀರಿ ಯಾವ ವಿಚಾರಕ್ಕೆ ದೂರನ್ನು ಕೊಡಿಸಿದ್ದರು ಎಂದು ನಿಮಗೆ ವೈಯಕ್ತಿಕವಾಗಿ ತಿಳಿದಿಲ್ಲ ಎಂದರೆ ಸರಿ. ದಿನಾಂಕ 19.04.2019 ರಂದು ರಾತ್ರಿ 7.00 ಗಂಟೆಗೆ ರತ್ನಮ್ಮ ನಿಮಗೆ ಕರೆ ಮಾಡಿ 1 ನೇ ಆರೋಪಿ ಆಟೋ ತೆಗೆದುಕೊಳ್ಳಲು ರೂ.50,000/- ಹಣವನ್ನು ಕೇಳುತ್ತಿರುವುದಾಗಿ ಲತಾ ಆಕೆಗೆ ತಿಳಿಸಿದ್ದಾಗಿ ನಿಮಗೆ ಹೇಳಿದ್ದಾಗಿ ಹೇಳಿದ್ದೀರಿ ಆ ರೀತಿ ಕರೆ ಬಂದ ಬಳಿಕ ನೀವು

ಲತಾಳಿಗೆ ಕರೆ ಮಾಡಿ ಆ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ರೀತಿ ರತ್ನಮ್ಮ ಕರೆ ಮಾಡಿ 1 ನೇ ಆರೋಪಿ ಆಟೋ ತೆಗೆದುಕೊಳ್ಳಲು ರೂ.50,000/- ಹಣವನ್ನು ಕೇಳುತ್ತಿರುವುದಾಗಿ ಲತಾ ಆಕೆಗೆ ತಿಳಿಸಿದ್ದಾಗಿ ನೀವು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

33. ನಂತರ ಅದೇ ದಿನ ರಾತ್ರಿ 10.00 ಗಂಟೆಗೆ ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಮನೆಯಲ್ಲಿ ಧರ್ಮರಾಜು, ಸುವರ್ಣಮ್ಮ, ಬಸವರಾಜು, ಭುವನೇಶ್, ಭಾಗ್ಯ, ಮೂರ್ತಪ್ಪ, ಹರ್ಷಿತ, ಭಾಗ್ಯಾಳ ಮಗ, ವಿನಯ್, ಸುಶೀಲಮ್ಮ ಎಲ್ಲಾ ಸೇರಿ ಪ್ಲಾನ್ ಮಾಡಿಕೊಂಡು ನಿಮ್ಮ ಮಗಳಾದ ಲತಾಳನ್ನು ಕೊಲೆ ಮಾಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

34. ಮಾರನೆಯ ದಿನ ಬೆಳಿಗ್ಗೆ 9.00 ಗಂಟೆಗೆ ನೀವು ನಿಮ್ಮ ಊರಿನಲ್ಲಿ ಇದ್ದಾಗ ಬುಕ್ಕಾಂಬೂದಿಯ ಚಾಸಾ.13 ರಾಜಪ್ಪರವರು ನಿಮಗೆ ಫೋನ್ ಮಾಡಿ ಲತಾಳ ಕೊಲೆಯಾಗಿರುವುದಾಗಿ ನಿಮಗೆ ತಿಳಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಸ್ಥಳಕ್ಕೆ ಹೋದಾಗ ಅಲ್ಲಿ ತಹಶೀಲ್ದಾರ್ ಮತ್ತು ಡಿ ವೈ ಎಸ್ ಪಿ ರವರು ಬಂದಿದ್ದಾಗಿ ಹೇಳಿದ್ದೀರಿ ಅವರು ನಿಮ್ಮನ್ನು ವಿಚಾರಿಸಿದ್ದಾರೆ ಎಂದರೆ ಸಾಕ್ಷಿ ವಿಚಾರಿಸಿದ್ದಾರೆ ಎನ್ನುತ್ತಾರೆ. ಅಲ್ಲಿ ವಿಚಾರಿಸಿದ್ದನ್ನು ಹೊರತುಪಡಿಸಿ ಅವರು ಪುನಃ ನಿಮ್ಮನ್ನು ವಿಚಾರಿಸಿಲ್ಲ ಎಂದರೆ

ಸಾಕ್ಷಿ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಪುನಃ ವಿಚಾರಿಸಿದ್ದಾರೆ ಎನ್ನುತ್ತಾರೆ. ಆ ರೀತಿ ಪೊಲೀಸರು ನನ್ನನ್ನು ವಿಚಾರಿಸಿದ ದಿನಾಂಕ ನನಗೆ ಗೊತ್ತಿಲ್ಲ.

35. ದಿನಾಂಕ 12.07.2019 ರಂದು ನೀವು ನೀಡಿದ್ದೀರಿ ಎಂದು ಹೇಳಲಾದ ಮುಂದುವರೆದ ಹೇಳಿಕೆಯಲ್ಲಿ "ಲತಾಳು ಉಡೇವಾ ಗ್ರಾಮದಲ್ಲಿರುವ ನನ್ನ ಹೆಂಡತಿಯ ಅಕ್ಕ ರತ್ನಮ್ಮರವರಿಗೆ ದಿನಾಂಕ 19.04.2019 ರಂದು ರಾತ್ರಿ 7.00 ಗಂಟೆಗೆ ಫೋನ್ ಮಾಡಿಸಿ ಹಣ ಕೇಳಿಸಿರುತ್ತಾನೆ" ಎಂದು ತಿಳಿಸಿದ್ದೀರಾ ಎಂದರೆ ಸಾಕ್ಷಿ ಆ ರೀತಿ ತಿಳಿಸಿಲ್ಲ ಆದರೆ ನನ್ನ ಅಕ್ಕ ರತ್ನಮ್ಮ ಎಂದು ತಿಳಿಸಿದ್ದೇನೆ ಎನ್ನುತ್ತಾರೆ. ಸಾಕ್ಷಿಯ ಸದರಿ ಹೇಳಿಕೆಯ ಭಾಗವನ್ನು ನಿಡಿ.3 ಎಂದು ಗುರುತಿಸಲಾಯಿತು.

36. ನಿಪಿ.2 ಫೋಟೋದಲ್ಲಿ ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಮನೆಯ ಬೆಡ್ ರೂಮಿನಲ್ಲಿ ನಿಮ್ಮ ಮಗಳಾದ ಲತಾಳನ್ನು ವೈಯರ್ ಹಗ್ಗದಿಂದ ಕುತ್ತಿಗೆ ಬಿಗಿದು ಸಾಯಿಸಿ, ಅಡಿಕೆ ಬೊಂಬಿಗೆ ವೇಲಿನಿಂದ ನೇಣು ಹಾಕಿರುವುದು ಕಂಡು ಬರುತ್ತದೆ ಎಂದು ನುಡಿದಿರುವುದು ಸುಳ್ಳು ಎಂದರೆ ಸರಿಯಲ್ಲ.

37. ನಿಪಿ.9 ಫೋಟೋದಲ್ಲಿ ನಿಮ್ಮ ಮಗಳ ಮೃತ ದೇಹವನ್ನು ನೇಣಿನಿಂದ ಕೆಳಗೆ ಇಳಿಸಿ ಮಲಗಿಸಿರುವುದು ಕಂಡು ಬರುತ್ತದೆ ಎಂದು ನುಡಿದಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರು ವೈಯರ್ ನ ಹಗ್ಗದಿಂದ ಲತಾಳ ಕುತ್ತಿಗೆಯನ್ನು ಬಿಗಿದು ಸಾಯಿಸಿ ನಂತರ ವೇಲಿನಿಂದ ಅಡಿಕೆ

ಬೊಂಬಿಗೆ ನೇಣು ಹಾಕಿರುವುದಾಗಿ ತಿಳಿಯಿತು ಎಂದು ತಿಳಿಸಿದ್ದೀರಿ ಆ ರೀತಿ ನಿಮಗೆ ಆ ವಿಷಯವನ್ನು ನಿಮಗೆ ತಿಳಿಸಿದ್ದವರು ಯಾರು ಎಂದರೆ ಸಾಕ್ಷಿ ಬುಕ್ಕಾಂಬೂದಿಯ ರಾಜಪ್ಪನವರಿಂದ ತಿಳಿಯಿತು ಎನ್ನುತ್ತಾರೆ. ಆ ವಿಷಯ ರಾಜಪ್ಪನವರಿಂದ ತಿಳಿದಿದ್ದಾಗಿ ಪೊಲೀಸರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ.6, 7 ಮತ್ತು 8 ಫೋಟೋಗಳಲ್ಲಿ ಲತಾಳ ಕುತ್ತಿಗೆ, ಕೈ ಮತ್ತು ಕಾಲಿನಲ್ಲಿ ಆಗಿದ್ದ ಗಾಯಗಳು ಕಂಡು ಬರುತ್ತವೆ ಎಂದು ನುಡಿದಿರುವುದು ಸುಳ್ಳು ಆಕೆಯ ಶರೀರದಲ್ಲಿ ಯಾವುದೇ ರೀತಿಯ ಗಾಯಗಳಾಗಿರಲಿಲ್ಲ ಎಂದರೆ ಸರಿಯಲ್ಲ.

38. 1 ನೇ ಆರೋಪಿಗೆ ಬೋವಿ ಜಾತಿಗೆ ಸೇರಿದ ಹುಡುಗಿಯೊಂದಿಗೆ ಸಂಬಂಧವಿತ್ತು ಮತ್ತು ಆ ವಿಷಯ ಆತನ ತಂದೆ ತಾಯಿ ಮತ್ತು ಸಂಬಂಧಿಕರಿಗೆ ಗೊತ್ತಾಗಿ ಲತಾಳಿಗೆ ಪೊಲೀಸ್ ಕೆಲಸ ಕೊಡಿಸುವುದಾಗಿ ಆಕೆಯನ್ನು ನಂಬಿಸಿ, ಆಕೆಯ ಮದುವೆಯನ್ನು 1 ನೇ ಆರೋಪಿಯೊಂದಿಗೆ ಮಾಡಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

39. ಲತಾ ನಿಮಗೆ ಕೊಟ್ಟಿದ್ದಳು ಎಂದು ಹೇಳಲಾದ ಮೊಬೈಲ್ ನಲ್ಲಿ ಆ ವಿಚಾರಗಳ ಬಗ್ಗೆ ಕಾಲ್ ರೆಕಾರ್ಡ್ ಗಳು ಇದ್ದವು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ಮತ್ತು ಆತನ ಸಂಬಂಧಿಕರು ಸೇರಿ ಲತಾಳನ್ನು

ಕೊಲೆ ಮಾಡಿದ್ದಾಗಿ ತಪ್ಪಾಗಿ ಗ್ರಹಿಸಿಕೊಂಡು ಆ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ